# 7

# “ಏಳೆಪ್ಪತ್ತು ಸಲ”

## (ಮತ್ತಾಯ 18:21-35)

ಸೌತ ಸೀ ಐಲಂಡಗಳಲ್ಲಿ ಒಂದಾದ ಹುಆಹೈನದ ಅರಸ ಟಮಟೊಯೆ 1818ರಲ್ಲಿ ಕ್ರೈಸ್ತನಾದನು. ತನ್ನನ್ನೂ ಕ್ರೈಸ್ತತ್ವ ಸ್ವೀಕರಿಸಿದ ಇತರರನ್ನೂ ಹಿಡಿದು ಬೆಂಕಿ ಹಚ್ಚಿ ಕೊಲ್ಲಬೇಕೆಂದು ಅವನ ಜನಾಂಗದ ಜೊತೆ ನಿವಾಸಿಗಳಲ್ಲಿ ಒಂದು ದುಷ್ಟ ರಹಸ್ಯಯೋಜನೆ ನಡೆಯುತ್ತಿರುವದನ್ನು ಅವನು ಕಂಡು ಹಿಡಿದನು.

ಅವನು ಸೈನಿಕರ ಒಂದು ಗುಂಪನ್ನು ಸಂಘಟಿಸಿ ಹೀಗೆ ಯೋಚಿಸುತ್ತಿರುವವರನ್ನು ರಹಸ್ಯವಾಗಿ ಸುತ್ತುವರಿದು, ಯಾವ ಹಿಂಸೆಯನ್ನು ಮಾಡದೇ ಅವರನ್ನು ಸೆರೆ ಹಿಡಿದನು. ಆಮೇಲೆ ಅವರಿಗೆ ದೊಡ್ಡ ಔತಣವನ್ನು ಏರ್ಪಡಿಸಿದನು. ಇದು ಕ್ಷಮಾಪಣೆಯ ಸಂಕೇತವೂ ಕ್ರಿಸ್ತನು ನೀಡುವ ಕ್ಷಮಾಪಣೆಯ ಪ್ರದರ್ಶನವೂ ಆಗಿತ್ತು.

ಟಮಟೊಯೆಯಿಂದಾದ ಈ ಅನಿರೀಕ್ಷಿತ ದಯೆಯ ಕಾರ್ಯವು ಸ್ಥಳೀಯ ಕಾಡು ಜನರಿಗೆ ಆಶ್ಚರ್ಯವನ್ನುಂಟುಮಾಡಿತು. ತಮ್ಮ ವಿಗ್ರಹಗಳನ್ನು ಸುಟ್ಟುಹಾಕಿ ಅವರೂ ಕ್ರೈಸ್ತರಾದರು. ಕ್ಷಮಾಪಣೆಯ ಶಕ್ತಿಯು ಅದ್ಭುತವಾದದ್ದು.[1]

ಕ್ಷಮಾಪಣೆಯು ಬಲವಾದದ್ದು. ಕ್ಷಮಿಸುವ ಹೃದಯವುಳ್ಳವರಾಗಿರುವುದು ತನ್ನ ಜನರಿಗಾಗಿರುವ ಯೇಸುವಿನ ವಿಷಯ ಸೂಚಿಯಲ್ಲಿ ಪ್ರಾಮುಖ್ಯವಾದದ್ದಾಗಿದೆ. ಕೇವಲ ಮತ್ತಾಯ 18ರಲ್ಲಿ ಮಾತ್ರವೇ ದಾಖಲೆಯಾದ ಕರುಣೆಯಿಲ್ಲದ ಸೇವಕನ ಹೋಲಿಕೆಯಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ.

### ಕ್ಷಮಾಪಣೆಯು ಬೋಧಿಸಲ್ಪಟ್ಟಿತು
### (ಮತ್ತಾಯ 18:21, 22)

ಒಂದು ಸಂದರ್ಭದಲ್ಲಿ ಪೇತ್ರನು ಯೇಸುವಿನ ಬಳಿಗೆ ಬಂದು, “ಸ್ವಾಮೀ, ನನ್ನ ಸಹೋದರನು ನನಗೆ ತಪ್ಪುಮಾಡುತ್ತಾ ಬಂದರೆ ನಾನು ಎಷ್ಟು ಸಾರಿ ಅವನಿಗೆ ಕ್ಷಮಿಸಬೇಕು? ಏಳು ಸಾರಿಯೋ?” ಎಂದು ಕೇಳಿದನು (ವ. 21). “ಏಳು” ಎಂಬ ಸಂಖ್ಯೆಯನ್ನು ಪೇತ್ರನು ಯಾಕೆ ಉಪಯೋಗಿಸಿದನೆಂಬುದು ನಮಗೆ ತಿಳಿದಿರುವದಿಲ್ಲ. ಮೂರು ಸಲದ ವರೆಗೆ ಜನರು ಕ್ಷಮಿಸಬಹುದು ಎಂದು ರಬ್ಬಿಗಳು ಬೋಧಿಸಿದ್ದರು.[2] ಬಹುಶಃ ಪೇತ್ರನು ಅವರ ಸಂಖ್ಯೆಯನ್ನು ಸುಧಾರಿಸಲಿರಬಹುದು. ಈ ಏಳು ಸಂಖ್ಯೆಯು ಸಂಪೂರ್ಣತೆಯನ್ನು ಸೂಚಿಸಲು ಹೆಚ್ಚಾಗಿ ಉಪಯೋಗಿಸಲ್ಪಡಬಹುದು. ಪೇತ್ರನು ಉಪಯೋಗಿಸಿದ್ದಕ್ಕೂ ಈ ಕಾರಣವೇ ಇರಬಹುದು. ಕ್ಷಮಾಪಣೆಯ ಮೇಲೆ ಯೇಸು ಬೋಧಿಸಿದಾಗ ಏಳು ಎಂಬ ಸಂಖ್ಯೆಯನ್ನು ಉಪಯೋಗಿಸಿದ್ದನ್ನು ಪೇತ್ರನು ಜ್ಞಾಪಿಸಿಕೊಂಡಿರ ಬಹುದು. “ಅವನು ದಿನಕ್ಕೆ ಏಳು ಸಾರಿ ನಿನಗೆ ತಪ್ಪುಮಾಡಿ ಏಳು ಸಾರಿಯೂ ನಿನ್ನ ಕಡೆಗೆ ತಿರಿಗಿಕೊಂಡು - ನನಗೆ ಪಶ್ಚಾತ್ತಾಪವಾಯಿತು ಎಂದು ಹೇಳಿದರೆ

ಅವನಿಗೆ ಕ್ಷಮಿಸಿಬಿಡು" (ಲೂಕ 17:4).

ಯೇಸು ಪೇತ್ರನಿಗೆ "ಏಳು ಸಾರಿ ಎಂದಲ್ಲ, ಏಳೆಪ್ಪತ್ತು ಸಾರಿ" (ವ. 22) ಎಂದು ಉತ್ತರ ಕೊಟ್ಟನು - 490 ಸಲ ಎಂದು ಬೇರೆ ಮಾತುಗಳಲ್ಲಿ ಹೇಳಬಹುದು![3] ಕ್ಷಮಾಪಣೆಯ ಬಗ್ಗೆ ಎರಡು ಮಹತ್ವದ ಪಾಠಗಳನ್ನು ಬೋಧಿಸಲು ಹೆಚ್ಚಿನ ಸಂಖ್ಯೆಯನ್ನು ಉಪಯೋಗಿಸಿದನು: ಮೊದಲನೆಯದು, ನಾವು ಕ್ಷಮಿಸುವದನ್ನು ರೂಢಿಯಲ್ಲಿಟ್ಟು ಕೊಳ್ಳುವ ಅವಶ್ಯಕತೆ ಇದೆ. ಒಬ್ಬ ವ್ಯಕ್ತಿಯನ್ನು 490 ಸಲ ಕ್ಷಮಿಸುವ ದರೊಳಗಾಗಿ ಆ ರೂಢಿಯಲ್ಲಿ ನಾವು ಮುಳುಗಿಬಿಟ್ಟಿರುತ್ತೇವೆ! ಎರಡನೆಯದು, ನಮಗೆ ಯಾರು ತೊಂದರೆ ಕೊಟ್ಟಿದ್ದಾರೆ, ನಾವು ಅವರನ್ನು ಎಷ್ಟುಸಲ ಕ್ಷಮಿಸಿದ್ದೇವೆ ಎಂಬುದರ ದಾಖಲೆಯಿಡುವುದು ಹಾಸ್ಯಸ್ಪದವಾಗಿದೆ. "ಇದು ಅವನನ್ನು ಕ್ಷಮಿಸಿದ್ದು ಹದಿನೈದ ನೆಯ ಸಲ. ಇನ್ನು 475 ಸಲ ಗುರುತು ಮಾಡಬೇಕು. ಆಮೇಲೆ ಅವನನ್ನು ಕ್ಷಮಿಸುವ ಆಗತ್ಯತೆಯಿರುವದಿಲ್ಲ" ಎಂದು ಇತರರ ಬಗ್ಗೆ ಒಂದು ಚಿಕ್ಕ ಪುಸ್ತಕದಲ್ಲಿ ದಾಖಲೆ ಮಾಡುವುದು ತಮಾಷೆಯಾದದ್ದಾಗುತ್ತದೆ. ಪ್ರೀತಿಯು "ಅಪಕಾರವನ್ನು ಮನಸ್ಸಿನಲ್ಲಿ ಇಟ್ಟು ಕೊಳ್ಳುವದಿಲ್ಲ" (1 ಕೊರಿಂಥ. 13:5).

ಯೇಸು ಪೇತ್ರನಿಗೆ ಹೇಳಿದ್ದು ಸಂಬಂಧವಿಲ್ಲದ ಪ್ರತ್ಯೇಕವಾದ ಬೋಧನೆಯಲ್ಲ. ತನ್ನ ಸಭೆಗಾಗಿರುವ ಯೇಸುವಿನ ಯೋಜನೆಯಲ್ಲಿ ಕ್ಷಮಾಪಣೆಯು ಅತೀ ಅವಶ್ಯವಾದ ಭಾಗವಾಗಿತ್ತು. ಆತನು ತನ್ನ ಅನುಯಾಯಿಗಳಿಗೆ ಹೀಗೆ ನಿರ್ದೇಶಿಸಿದನು,

> ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನು ಕ್ಷಮಿಸುವನು. ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆ ಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ (ಮತ್ತಾಯ 6:14, 15).

> ಇದಲ್ಲದೆ ತೀರ್ಪುಮಾಡಬೇಡಿರಿ, ಆಗ ನಿಮಗೂ ತೀರ್ಪಾಗುವದಿಲ್ಲ; ಅಪರಾಧಿಯೆಂದು ನಿರ್ಣಯಿಸಬೇಡಿರಿ, ಆಗ ನಿಮ್ಮನ್ನೂ ಅಪರಾಧಿಗಳೆಂದು ನಿರ್ಣಯಿಸುವದಿಲ್ಲ; ಬಿಡಿಸಿರಿ, ಆಗ ನಿಮ್ಮನ್ನು ಬಿಡಿಸುವರು (ಲೂಕ 6:37).

## ಕ್ಷಮಾಪಣೆಯು ಉದಾಹರಿಸಲ್ಪಟ್ಟಿತು (ಮತ್ತಾಯ 18:23-35)

"ಏಳೆಪ್ಪತ್ತು ಸಲ" ಕ್ಷಮಿಸಬೇಕೆಂದು ಯೇಸು ಪೇತ್ರನಿಗೆ ಹೇಳಿದನಂತರ, ಆತನು ಒಂದು ಹೋಲಿಕೆಯನ್ನು ಹೇಳುವದರಿಂದ ತನ್ನ ಬೋಧನೆಯನ್ನು ಹೇಳಿದನು: ಹೋಲಿಕೆಯು ಕರುಣೇಯಿಲ್ಲದ ಸೇವಕನಾದಾಗಿತ್ತು.

> ಆದದರಿಂದ ಪರಲೋಕರಾಜ್ಯವು ತನ್ನ ಸೇವಕರಿಂದ ಲೆಕ್ಕವನ್ನು ತೆಗೆದು ಕೊಳ್ಳಬೇಕೆಂದಿದ್ದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ. ಅವನು ಲೆಕ್ಕಾ ತೆಗೆದುಕೊಳ್ಳುವದಕ್ಕೆ ಪ್ರಾರಂಭ ಮಾಡಿದಾಗ ಕೋಟ್ಯಂತರ ಸಾಲಾ ಮಾಡಿದವನೊಬ್ಬನನ್ನು ಅವನ ಬಳಿಗೆ ಹಿಡಿತಂದರು (ಮತ್ತಾಯ 18:23, 24).

ದೃಶ್ಯವನ್ನು ನಿಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಿರಿ. ಅರಸನು ದೀರ್ಘ ಪ್ರಯಾಣದನಂತರ ಹಿಂದಿರುಗಿ ಬಂದಿದ್ದನು. ತನ್ನ ಸೇವಕರನ್ನು, ದಾಸರನ್ನು ಕರೆದನು. ಒಬ್ಬರ ನಂತರ ಒಬ್ಬರು ಅವನ ಸಿಂಹಾಸನದ ಮುಂದೆ ನಿಂತುಕೊಂಡರು. ತಮ್ಮ ಮನೆವಾರ್ತೆಯ ಲೆಕ್ಕಾಚಾರ

ಒಪ್ಪಿಸಿದರು. ಅಂತಿಮವಾಗಿ ಅರಸನ ಪೂರ್ಣ ಭರವಸೆಗೆ ಪಾತ್ರನಾದ ದಾಸನೊಬ್ಬನು ಅವನ ಮುಂದೆ ಬಂದು ನಿಂತನು. ಅರಸನು ಅವನಿಗೆ ಬಹುದೊಡ್ಡ ಮೊತ್ತದ ಹಣವನ್ನು ಒಪ್ಪಿಸಿಕೊಟ್ಟಿದ್ದನು. ಮೊದಲು ಆ ಸೇವಕನು ಮುಗುಳ್ನಗುತ್ತ ನಿಂತನು. ಆದರೆ ಅವನು ಕೋಟ್ಯಂತರ ಸಾಲ ಮಾಡಿರುವುದು ಲೆಕ್ಕಾಚಾರಗಳ ಪುಸ್ತಕದಿಂದ ತೋರಿಸಲ್ಪಟ್ಟಾಗ ಅವನು ನಿರಾಶೆಯಿಂದ ತಲೆಬಾಗಿ ನಿಂತನು!

"ಕೋಟ್ಯಂತರ" ಎಂಬುದರ ಮೊತ್ತವು ಎಷ್ಟು ಎಂಬುದನ್ನು ಸ್ಪಷ್ಟವಾಗಿ ನಮಗೆ ಹೇಳಲಿಕ್ಕಾಗುವುದಿಲ್ಲ. ಒಂದು "ತಲಾಂತು" ಎಂಬುದು ಹಣದ ನಾಣ್ಯವಾಗಲೀ ನೋಟು ಆಗಲೀ ಆಗಿರಲಿಲ್ಲ. ಆದರೆ ಅಮೂಲ್ಯ ಲೋಹದ ತೂಕವಾಗಿತ್ತು. ಸ್ಥಳದಿಂದ ಸ್ಥಳಕ್ಕೆ ತೂಕವು ಭಿನ್ನವಾಗಿದ್ದುದರಿಂದ (ಲೋಹದ ಮೌಲ್ಯದಂತೆ) ತಲಾಂತುಗಳ ಬೆಲೆ ಕಟ್ಟುವದರಲ್ಲಿ ಅಧಿಕಾರಿಗಳು ಬಹಳ ಚಿನ್ನವಾಗಿರುತ್ತಿದ್ದರು.[4] ಇಲ್ಲಿ ನಮ್ಮ ಅಧ್ಯಯನಕ್ಕಾಗಿ ಆ ಮೊತ್ತವು ಕೋಟ್ಯಂತರ ಎಂದು ಇಟ್ಟುಕೊಳ್ಳೋಣ. ಅದು ಇಂದಿನ ಮಾರ್ಕೆಟ ಬೆಲೆಗಿಂತ ಕಡಿಮೆಯಾಗಿದೆ ಎನ್ನೋಣ.[5] ಆ ಸೇವಕನು ಅಷ್ಟೊಂದು ಹಣವನ್ನು ಏನು ಮಾಡಿದನು ಎಂಬಿತ್ಯಾದಿ ವಿವರಣೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವ ಅವಶ್ಯಕತೆಯಿಲ್ಲ. ಅವನ ಸಾಲವು ಅವನು ಹಿಂದಿರುಗಿಸಲು ಸಾಧ್ಯವಾಗದಷ್ಟು ದೊಡ್ಡ ಮೊತ್ತದಲ್ಲಿ ಇತ್ತೆಂಬುದು ಯೇಸುವಿನ ಸೂಚನೆಯಾಗಿತ್ತು.

ಅಷ್ಟು ದೊಡ್ಡ ಮೊತ್ತವನ್ನು ಹಿಂದಿರುಗಿ ಕೊಡಲು ಅವನಲ್ಲಿ ಏನೂ ಇರಲಿಲ್ಲವೆಂದು ವ. 25 ಹೇಳುತ್ತದೆ. ಬಹುಶಃ ಅವನು ಆ ಹಣವನ್ನು ಜೂಜಿನಲ್ಲಿ ಕಳೆದು ಕೊಂಡಿದ್ದನು ಇಲ್ಲವೇ ಬಂಡವಾಳ ಹೂಡಿದ್ದರಲ್ಲಿ ಮೋಸ ಹೋಗಿದ್ದನು. ಹೇಗೋ ಹಣವು ಹೋಗಿ ಬಿಟ್ಟಿತ್ತು. ತನ್ನ ಯಜಮಾನನಿಗೆ ಹಿಂದಿರುಗಿಸಲು ಯಾವ ಮಾರ್ಗ ಇರಲಿಲ್ಲ. "ಅವನ ಒಡೆಯನು ಅವನನ್ನೂ ಅವನ ಹೆಂಡತಿ ಮಕ್ಕಳನ್ನೂ ಅವನ ಬದುಕೆಲ್ಲವನ್ನೂ ಮಾರಿ ಅದನ್ನು ತೀರಿಸಬೇಕೆಂದು ಅಪ್ಪಣೆ ಮಾಡಿದನು" (ವ. 25ಬಿ). ಇದು ಸಾಮಾನ್ಯವಾದ ರೂಢಿಯಾಗಿತ್ತು. ಸಾಲವನ್ನು ಹಿಂದಿರುಗಿ ಕೊಡಲು ಎಂದೂ ಆಗದ್ದರಿಂದ ಸೇವಕನಿಗೂ ಅವನ ಕುಟುಂಬವರ್ಗಕ್ಕೂ ಜೀವಾವಧಿ ದಂಡನೆ ಆಗುತ್ತಿತ್ತು.

ಅರಸನು ಶಿಕ್ಷೆಯನ್ನು ವಿಧಿಸಿದಾಗ ಆ ಸೇವಕನು ತನ್ನ ಯಜಮಾನನ ಕಾಲಿಗೆ ಬಿದ್ದು "ಒಡಯನೇ, ಸ್ವಲ್ಪ ತಾಳಿಕೋ, ನಿನ್ನದೆಲ್ಲಾ ನಾನು ಕೊಟ್ಟು ತೀರಿಸುತ್ತೇನೆ" (ವ. 26) ಎಂದು ಬೇಡಿಕೊಂಡನು. ತನ್ನ ಯಜಮಾನನಿಗೆ ಹಿಂದಿರುಗಿ ಕೊಡಲು ತನ್ನಲ್ಲಿ ಏನೂ ಇಲ್ಲದಿದ್ದರೂ ಅವನು ನಿರಾಶೆಯಿಂದ ಇದ್ದರೂ ಈ ರೀತಿ ಹೇಳಿದ್ದು ಅಪಹಾಸ್ಯಕರವಾಗಿ ತೋರುತ್ತದೆ.

ಆಗ ಯೇಸು ಕ್ಷಮಾಪಣೆಯ ಈ ಸುಂದರವಾದ ಉದಾಹರಣೆಯನ್ನು ಕೊಟ್ಟನು. "ಆ ಸೇವಕನ ಒಡೆಯನು ಕನಿಕರಪಟ್ಟು ಅವನನ್ನು ಬಿಡಿಸಿ ಆ ಸಾಲವನ್ನೆಲ್ಲಾ ಬಿಟ್ಟುಬಿಟ್ಟನು" (ವ. 27).

ಹೀಗಿದ್ದರೂ ಯೇಸು ತನ್ನ ಕಥೆಯನ್ನು ಮುಗಿಸಲಿಲ್ಲ. "ತರುವಾಯ ಆ ಸೇವಕನು ಹೊರಕ್ಕೆ ಬಂದು ತನಗೆ ನೂರು ಹಣಾ ಕೊಡ ಬೇಕಾದ ಒಬ್ಬ ಜೊತೇ ಸೇವಕನನ್ನು ಕಂಡನು" (ವ. 28ಎ). ಕೋಟ್ಯಂತರ ಸಾಲದ ಕ್ಷಮಾಪಣೆ ಹೊಂದಿದ ಸೇವಕನು ಹಬ್ಬ ಆಚರಿಸುವಂಥ ಭಾವನೆಯಲ್ಲಿ ಇದ್ದನು. ತನ್ನಲ್ಲಿ ಹಣವಿಲ್ಲದ್ದರಿಂದ ತನಗೆ ನೂರು ಹಣ ಕೊಡಬೇಕಾಗಿದ್ದ ಜೊತೆಗಾರ ಸೇವಕನನ್ನು ಹುಡುಕಿದನು.

ಒಂದು ದಿನಾರು ಆ ದಿನದಲ್ಲಿ ಸಾಮಾನ್ಯ ಕೂಲಿಯ ಒಂದು ದಿನದ ಸಂಬಳವಾಗಿತ್ತು. ಈ ಹಣದ ಲೆಕ್ಕಾಚಾರ ಮಾಡುವ ಅವಶ್ಯಕತೆಯಿಲ್ಲ. ಆ ದಿನಗಳಲ್ಲಿ ಕೂಲಿಗಳು ಕಡಿಮೆ ಸಂಬಳಕ್ಕಾಗಿ ದುಡಿಯುತ್ತಿದ್ದರು. ನಿಶ್ಚಿತವಾದ ಮೊತ್ತವು ಇಲ್ಲಿ ಮಹತ್ವದಲ್ಲ.

ಮೊದಲನೆಯವನಿಗೆ ಕ್ಷಮಿಸಲ್ಪಟ್ಟ ಮೊತ್ತದ ಎದುರಿನಲ್ಲಿ ಈ ಹಣವು ಗಣನೀಯವಾದದ್ದಾಗಿದ್ದಿಲ್ಲ.

ಕೋಟ್ಯಂತರ ದಿನಾರುಗಳ ರಿಯಾಯಿತಿಯನ್ನು ಹೊಂದಿದವನು ಕೊನೆಗೆ ಈ ಜೊತೇ ಸೇವಕನನ್ನು ಕಂಡುಹಿಡಿದು, "ಅವನನ್ನು ಹಿಡಿದು - ಎಲಾ, ನನ್ನ ಸಾಲಾ ತೀರಿಸು ಎಂದು ಹೇಳಿ ಕುತ್ತಿಗೆ ಹಿಸಿಕಿದನು" (ವ. 28ಬಿ). ಅವನ ಕುತ್ತಿಗೆಗೆ ಕೈ ಹಾಕಿ ನನ್ನ "ನೂರು ಹಣಾ" ಕೊಡು ಎಂದು ಕೂಗಿದ್ದನ್ನು ಕೇಳ ಬಹುದು.

"ಆಗ ಅವನ ಜೊತೇ ಸೇವಕನು ಅವನ ಕಾಲಿಗೆ ಬಿದ್ದು - ಸ್ವಲ್ಪ ತಾಳಿಕೋ, ತೀರಿಸುತ್ತೇನೆ ಎಂದು ಬೇಡಿಕೊಂಡನು" (ವ. 29). ದಯೆಗಾಗಿ ಅರಸನೊಂದಿಗೆ ಬೇಡಿ ಕೊಂಡಾಗ ಮೊದಲನೆಯ ಸೇವಕನು ಇದೇ ಮಾತುಗಳನ್ನು ಹೇಳಿದ್ದನು. ಈ ಮಾತುಗಳು ಅವನ ಜ್ಞಾಪಕಕ್ಕೆ ಬಂದು ಅವನ ಮನಸ್ಸಾಕ್ಷಿಯನ್ನು ಚುರುಕುಗೊಳಿಸ ಬಹುದಿತ್ತು. ಆದರೆ ಅದು ಹಾಗಾಗಲಿಲ್ಲ. ಅವನು ಅವನನ್ನು ಕ್ಷಮಿಸಬಹುದಿತ್ತು. ತನಗೆ ನೂರು ಹಣ ಸಿಗದಿದ್ದರಿಂದ ಅವನು ರೋಷಗೊಂಡನು.

"ಆದರೆ ಅವನು ಒಪ್ಪದೆ ಹೊರಟುಹೋಗಿ ಆ ಸಾಲಾ ತೀರಿಸುವ ತನಕ ಅವನನ್ನು ಸೆರೆಮನೆಯಲ್ಲಿ ಹಾಕಿಸಿದನು" (ವ. 30)[6] ಅವನು ಸೆರೆಮನೆಯಲ್ಲಿದ್ದಾಗ ಹಣ ಸಂಪಾದಿಸಲು ಆಗದ್ದರಿಂದ ಸ್ವಲ್ಪ ಹಣಕ್ಕಾಗಿ ಕ್ಷಮಿಸದವನು ಅವನನ್ನು ಜೀವಾವಧಿ ಸೆರೆಮನೆಯಲ್ಲಿರುವ ಶಿಕ್ಷಗೆ ಗುರಿಪಡಿಸಿದನು.

ಈ ಮನುಷ್ಯನ ನಡವಳಿಕೆಯು ಇತರ ಸೇವಕರಿಂದ ಗಮನಿಸಲ್ಪಟ್ಟಿತು. "ಅವನ ಜೊತೇ ಸೇವಕರು ನಡೆದ ಸಂಗತಿಯನ್ನು ನೋಡಿ ಬಹಳವಾಗಿ ದುಃಖಪಟ್ಟು ಒಡೆಯನ ಬಳಿಗೆ ಬಂದು ನಡೆದದ್ದನ್ನೆಲ್ಲಾ ತಿಳಿಸಿದರು" (ವ. 31). ಅರಸನು ಕೋಪಗೊಂಡನು.

> ಆಗ ಅವನ ಒಡೆಯನು ಅವನನ್ನು ಕರಸಿ - ಎಲಾ ನೀಚನೇ, ನೀನು ನನ್ನನ್ನು ಬೇಡಿ ಕೊಂಡದ್ದರಿಂದ ಆ ಸಾಲವನ್ನೆಲ್ಲಾ ನಾನು ಬಿಟ್ಟು ಬಿಟ್ಟೆನಲ್ಲಾ; ನಾನು ನಿನ್ನನ್ನು ಕರುಣಿಸಿದ ಹಾಗೆ ನೀನು ಸಹ ನಿನ್ನ ಜೊತೇ ಸೇವಕನನ್ನು ಕರುಣಿಸ ಬಾರದಾಗಿತ್ತೇ ಎಂದು ಹೇಳಿ ಸಿಟ್ಟುಮಾಡಿ ತನಗೆ ಕೊಡಬೇಕಾದ ಸಾಲವನ್ನು ತೀರಿಸುವ ತನಕ ಪೀಡಿಸುವವರ ಕೈಗೆ ಒಪ್ಪಿಸಿದನು (32-34 ವಚನಗಳು).

ಈ ಸೇವಕನು ಪುನಃ ಇನ್ನೊಂದು ಸಲ ತನ್ನ ಯಜಮಾನನನ್ನು ಬೇಡಿ ಕೊಂಡಿರಬೇಕು. ಆದರೆ ಪ್ರಯೋಜನವಾಗಲಿಲ್ಲ. ತನಗೆ ನ್ಯಾಯ ಬೇಕೆಂದು ಅವನು ತೋರಿಸಿದ್ದನು; ಅರಸನು ಅವನಿಗೆ ನ್ಯಾಯಕೊಟ್ಟನು. ಸಾಲಗಾರರನ್ನು ಕೆಲವು ಸಲ ಪೀಡಿಸುವವರ[7] ಕೈಗೆ ಒಪ್ಪಿಸುತ್ತಿದ್ದರು. ಸಾಲಗಾರರು ಎಲ್ಲಿಯಾದರೂ ಏನನ್ನಾದರೂ ಬಚ್ಚಿಟ್ಟಿರುವರೋ ಎಂಬುದನ್ನು ತಿಳಿದುಕೊಳ್ಳಲು ಅವರಿಂದ ಅದು ಬಹಿರಂಗ ಪಡಿಸಲ್ಪಡುವಂತೆ ಒತ್ತಾಯ ತರಲು ಅವರಿಗೆ ಬಹಳ ಹಿಂಸೆ ಕೊಡುತ್ತಿದ್ದರು. ಯಾವುದೇ ಹಣದ ಮೂಲಗಳು ಅವನಲ್ಲಿರದಿದ್ದರೆ ಅವನು ನಿರಂತರವೂ ಹಿಂಸಿಸಲ್ಪಡುವನು. ಬಹುಶಃ ಇದು ನಿತ್ಯ ದಂಡನೆಗೆ ಸಂಬಂಧಿಸಿದೆ.

ಯೇಸು ಈ ಸಾಮಾಧಾನಪಡಿಸುವ ಮಾತುಗಳಿಂದ ಮುಕ್ತಾಯ ಗೊಳಿಸಿದನು: "ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃ ಪೂರ್ವಕವಾಗಿ ಕ್ಷಮಿಸದೆ ಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು" (ವ. 35). ನಿಮ್ಮ ಆಯ್ಕೆಯು ಕ್ಷಮಿಸುವುದು ಇಲ್ಲವೇ ಕಳಕೊಳ್ಳುವುದು - ದೇವರು ನಮ್ಮ ಮೇಲೆ ದಯಪಾಲಿಸಲು ಬಯಸುವ ಕ್ಷಮಾಪಣೆಯನ್ನು ಕಳೆದುಕೊಳ್ಳು ವುದು. ಯೇಸುವಿನ ಸಹೋದರ ಯಾಕೋಬನು ಈ ಮಾತುಗಳನ್ನು ಬರೆದಿದ್ದಾನೆ: "ಕರುಣೆ

ತೋರಿಸದೆ ಇರುವವನಿಗೆ ನ್ಯಾಯತೀರ್ಮಾನದಲ್ಲಿ ಕರುಣೆಯು ತೋರಿಸಲ್ಪಡುವದಿಲ್ಲ" (ಯಾಕೋಬ 2:13).

ಈ ಹೋಲಿಕೆಯಿಂದ ಅನೇಕ ಪಾಠಗಳನ್ನು ಕಲಿಯಬಹುದು. ಒಂದು, ದೇವರ ಕೃಪೆಯಿಲ್ಲದ ಪಾಪಿಯ ನಿರಾಶಾದಾಯಕ ಪರಿಸ್ಥಿತಿ. ಕೋಟ್ಯಂತರ ಸಾಲಾ ಮಾಡಿದವನು ನಮ್ಮೊಬ್ಬೊಬ್ಬರನ್ನು ಪ್ರತಿನಿಧೀಕರಿಸುತ್ತಾನೆ. ಆತ್ಮಿಕವಾಗಿ ನಾವು ಸಾಲವನ್ನು ಎಂದೂ ತೀರಿಸಲಾರೆವು. ನಾವೆಲ್ಲರೂ ಪಾಪಿಗಳೇ (ರೋಮಾಪುರ 3:23) ಹಾಗೂ ಪಾಪದ ಸಂಬಳವು ಇನ್ನೂ ಆತ್ಮಿಕ ಮರಣವೆ (ರೋಮಾಪುರ 6:23). ದುರ್ದೈವದಿಂದ, ನಮ್ಮಲ್ಲಿ ಅನೇಕರು, "ಸ್ವಲ್ಪ ತಾಳಿಕೋ ನಿನ್ನದೆಲ್ಲಾ ನಾನು ಕೊಟ್ಟು ತೀರಿಸುತ್ತೇನೆ" (ವ. 26) ಎಂದು ಅರಸ ನೊಂದಿಗೆ ಬೇಡಿಕೊಂಡ ಮನುಷ್ಯನಂತೆ ಚಿತ್ರಿಸಲ್ಪಟ್ಟಿದ್ದಾರೆ. ತಮ್ಮ ಉತ್ತಮ ಜೀವಿತದಿಂದ ಇಲ್ಲವೇ ತಮ್ಮ ಒಳ್ಳೆ ಕಾರ್ಯಗಳಿಂದ ತಮ್ಮ ಪಾಪಗಳಿಗಾಗಿ ಆತ್ಮಿಕವಾಗಿ ಕರ್ತನಿಗೆ ಹಿಂದಿರುಗಿಸಬಹುದೆಂದು ಕೆಲವರು ನಂಬುತ್ತಾರೆ. "ನನಗೆ ಸ್ವಲ್ಪ ಸಮಯಕೊಡು. ಕರ್ತನೇ, ನಾನು ಅದನ್ನು ಸರಿಪಡಿಸು ತ್ತೇನೆ." ಮಿಲಿಯನ್ ವರ್ಷಗಳಲ್ಲಿ ಅದನ್ನು ಎಂದೂ, ಎಂದೂ, ಎಂದೂ ಮಾಡಲಿಕ್ಕಾಗು ವದಿಲ್ಲ ಎಂದು ಈ ಹೋಲಿಕೆ ಘೋಷಿಸುತ್ತದೆ. ದೇವರು ನಮಗಾಗಿ ಮಾಡಿದ್ದನ್ನು ಮೆಚ್ಚಿಕೊಳ್ಳಬೇಕೆಂದರೆ, ನಾವಿದನ್ನು ಅರ್ಥ ಮಾಡಿಕೊಳ್ಳಬೇಕು.

ಹೀಗಿದ್ದರೂ, ಈ ಸಾಮ್ಯದ ಮುಖ್ಯ ಅಂಶವು ಕ್ಷಮಾಪಣೆ ಹೊಂದಿದವನು ಕ್ಷಮಿಸುವವನಾಗಿರುವದರ ಅವಶ್ಯಕತೆ. ಹೊಸ ಒಡಂಬಡಿಕೆಯ ಪುಟಗಳಲ್ಲಿ ಯಾವುದಾದರೂ ಸ್ಪಷ್ಟವಾಗಿ ಬೋಧಿಸಲ್ಪಟ್ಟಿದ್ದರೆ, ಅದು ನಾವು ಕ್ಷಮಿಸಲ್ಪಟ್ಟಿದ್ದರೆ ನಾವು ಯಾವಾಗಲೂ ಇತರರನ್ನು ಕ್ಷಮಿಸಲು ಸಿದ್ಧರಾಗಿರಬೇಕು. ಎಫೆಸ ಮತ್ತು ಕೊಲೊಸ್ಸೆಯಲ್ಲಿದ್ದ ಸಹೋದರರಿಗೆ ಪೌಲನು ಈ ಮಾತುಗಳನ್ನು ಬರೆದಿರುವನು:

> ಎಲ್ಲಾ ದ್ವೇಷ, ಕೋಪ, ಕ್ರೋಧ, ಕಲಹ, ದೂಷಣೆ ಇವುಗಳನ್ನೂ ಸಕಲ ವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರ ಮಾಡಿರಿ. ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ (ಎಫೆಸ. 4:31, 32).

> ಮತ್ತೊಬ್ಬನ ಮೇಲೆ ತಪ್ಪು ಹೊರಿಸುವದಕ್ಕೆ ಕಾರಣವಿದ್ದರೂ ತಪ್ಪು ಹೊರಿಸದೆ ಒಬ್ಬರಿಗೊಬ್ಬರು ಸೈರಿಸಿ ಕೊಂಡು ಕ್ಷಮಿಸಿರಿ. ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವೂ ಕ್ಷಮಿಸಿರಿ (ಕೊಲೊಸ್ಸೆ. 3:13).

## ಕ್ಷಮಾಪಣೆಯು ಚರ್ಚಿಸಲ್ಪಟ್ಟಿದೆ

### ಕ್ಷಮಿಸುವುದು ಎಂಬುದರ ಅರ್ಥವೇನು

ಕ್ಷಮಿಸುವುದು ಅಂದರೇನು? ಕೆಲವುಸಲ "ಕ್ಷಮಿಸಿರಿ ಮತ್ತು ಮರೆತುಬಿಡಿರಿ" ಎಂದು ಹೇಳುತ್ತಾರೆ. ಆದರೆ ಮಾನವ ಮನಸ್ಸನ್ನು ಅಧ್ಯಯನ ಮಾಡಿದವರು ಅಕ್ಷರಶಃವಾಗಿ, "ಕ್ಷಮಿಸುವುದು ಹಾಗೂ ಮರೆತು ಬಿಡುವುದು" ನಮಗೆ ಅಸಾಧ್ಯ ಎಂದು ಹೇಳು ತ್ತಾರೆ. ಎಂದಾದರೂ ನಾವು ನೋಡಿದ, ಕೇಳಿದ ಇಲ್ಲವೇ ಅನುಭವಿಸಿದ ಪ್ರತಿಯೊಂದೂ ನಮ್ಮ ಮೆದುಳಿನಲ್ಲಿ ಎಲ್ಲಿಯೋ ಹುದುಗಿರುತ್ತದೆ. ಅದು ಕೆಟ್ಟದ್ದಾಗಿರಬೇಕಾದ ಅವಶ್ಯಕತೆಯಿಲ್ಲ. ದೇವರೂ ಸಹ ಅಕ್ಷರಶಃವಾಗಿ "ಕ್ಷಮಿಸಿ, ಮರೆತು

ಬಿಡುವದಿಲ್ಲ."[8] ಇಲ್ಲದಿದ್ದರೆ, ಪುಸ್ತಕವು ಬರೆಯಲ್ಪಡುವದಕ್ಕಿಂತ ಮೊದಲು ಕ್ಷಮಿಸಲ್ಪಟ್ಟ ಪಾಪಗಳ ಬಗ್ಗೆ ದಾಖಲೆ ಮಾಡುವ ಆದಿಕಾಂಡ ಗ್ರಂಥವು ನಮಗಿರುತ್ತಿರಲಿಲ್ಲ. ದೇವರು ಮೋಶೆಗೆ ಆ ವಿವರಗಳನ್ನು ಪ್ರೇರೇಪಣೆಯಿಂದ ಕೊಟ್ಟಿರದಿದ್ದರೆ, ಅವನು ಸಾವಿರಾರು ವರ್ಷಗಳ ಹಿಂದೆ ಮಾಡಿದ ಪಾಪಗಳ ವಿವರಣೆಯನ್ನು ತಿಳಿಯುತ್ತಿರಲಿಲ್ಲ. ಹೀಗೆ ಅನೇಕ ವರ್ಷಗಳ ಮೊದಲು ಅವುಗಳಲ್ಲಿ ಕೆಲವು ಕ್ಷಮಿಸಲ್ಪಟ್ಟಿದ್ದರೂ ಆ ಪಾಪಗಳನ್ನು ದೇವರು "ಜ್ಞಾಪಿಸಿಕೊಂಡನು." ದೇವರು ನಮ್ಮ ಪಾಪಗಳನ್ನು ಕ್ಷಮಿಸುವನು ಹಾಗೂ ಅವುಗಳನ್ನು ಇನ್ನೆಂದೂ ನೆನೆಪಿಗೆ ತಂದು ಕೊಳ್ಳುವದಿಲ್ಲ (ಯೆರಮೀಯ 31:34; ಇಬ್ರಿಯ 8:12) ಎಂದು ಸತ್ಯವೇದ ಹೇಳುವಾಗ ಅದರ ಅರ್ಥವೇನು? ಆ ಸಮಯದಿಂದ ಆ ಪಾಪಗಳು ಸಂಭವಿಸಿಲ್ಲ ಎಂಬಂತೆ ದೇವರು ನಮ್ಮನ್ನು ನಡಿಸುತ್ತಾನೆ. ಒಬ್ಬ ಬರಹಗಾರನು ಹೀಗೆ ಹೇಳಿದ್ದಾನೆ:

> "ಮರೆತು ಬಿಡು" ಎಂಬುದಕ್ಕೆ ಸತ್ಯವೇದದಲ್ಲಿ "ಇನ್ನು ಮುಂದೆ ಅವಳಿಂದ ಪ್ರಭಾವ ಹೊಂದುವದಿಲ್ಲ. ಇಲ್ಲದೇ ಅದರಿಂದ ಪರಿಣಾಮಗೊಳ್ಳುವದಿಲ್ಲ" ಎಂದರ್ಥವಾಗುತ್ತದೆ. "ಅವರ ಪಾಪಗಳನ್ನೂ ಅವರ ದುಷ್ಕೃತ್ಯಗಳನ್ನೂ ನನ್ನ ನೆನಪಿಗೆ ಎಂದಿಗೂ ತರುವದಿಲ್ಲ" (ಇಬ್ರಿಯ. 10:17) ಎಂದು ದೇವರು ವಾಗ್ದಾನ ಮಾಡುವಾಗ, ಅನುಕೂಲಕರವಾಗಿ ಕೆಟ್ಟ ಮರೆವು ಇರುವುದೆಂದು ಆತನು ಸೂಚಿಸುವದಿಲ್ಲ. ಇದು ದೇವರೊಂದಿಗೆ ಅಸಾಧ್ಯವಾದದ್ದು. "ನಾನು ಇನ್ನೂ ಮುಂದೆ ಅವರ ಪಾಪಗಳನ್ನು ಅವರಿಗೆ ವಿರುದ್ಧವಾಗಿ ಎಣಿಸುವದಿಲ್ಲ. ಅವರ ಪಾಪಗಳು ನನ್ನೊಂದಿಗಿರುವ ಅವರ ಸಂಬಧಕ್ಕೆ ಇನ್ನೆಂದೂ ಪರಿಣಾಮ ಮಾಡುವುದಿಲ್ಲ. ಇಲ್ಲವೇ ಅವರ ಕಡೆಗಿರುವ ನನ್ನ ಮನೋಭಾವನೆಯ ಮೇಲೆ ಪ್ರಭಾವ ಬೀರುವದಿಲ್ಲ" ಎಂದು ದೇವರು ಹೇಳುತ್ತಿರುವನು.[9]

ಅದನ್ನೇ ನಾವು ಮಾಡಲು ಕಲಿಯಬೇಕೆಂಬುದು ನಮಗಿರುವ ಆಹ್ವಾನ.

ದ್ವೇಷವನ್ನು ಬಿಡುವದರ ಬಗ್ಗೆ ಜನರಿಗೆ ಸಹಾಯಮಾಡಲು ಪ್ರಯತ್ನಿಸಿದ್ದೇನೆ. ಮಾನವನ ಹೃದಯದಲ್ಲಿ ಕ್ಷಮಾಪಣೆಯು ಎರಡು ಹಂತಗಳಲ್ಲಿ ಆಗುತ್ತದೆಂದು ತಿಳಿದುಕೊಳ್ಳಲಿಕ್ಕೆ ಇದು ಸಹಾಯಕವಾದದ್ದೆಂದು ಕಂಡುಕೊಂಡಿದ್ದಾರೆ.

ಒಂದು ರೀತಿಯಲ್ಲಿ ಕ್ಷಮಾಪಣೆಯು ತಕ್ಷಣವೇ ಆಗುವಂಥದ್ದಾಗಿರಬಹುದು. ನಮ್ಮ ಪಾಠವು ಕ್ಷಮಾಪಣೆಯ ಈ ಲಕ್ಷಣವನ್ನು ಒತ್ತಿ ಹೇಳುತ್ತದೆ. ಕಡಿಮೆ ಅವಧಿಯ ಕ್ಷಮಾಪಣೆಯಲ್ಲಿ ಒಳಗೊಂಡಿರುವ ಮನೋಭಾವನೆ ಹಾಗೂ ಕಾರ್ಯಗಳಲ್ಲಿ ಕೆಲವೊಂದು ರೋಮಾಪುರ 12:18-21ರಲ್ಲಿ ಹೇಳಲ್ಪಟ್ಟಿದೆ:

> ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ. ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವದನ್ನು ದೇವರಿಗೆ ಬಿಡಿರಿ. ಯಾಕಂದರೆ ಮುಯ್ಯಿಗೆ ಮುಯ್ಯಿ ತೀರಿಸುವುದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬುದಾಗಿ ಬರೆದದೆ. ಹಾಗಾದರೆ ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು; ಬಾಯಾರಿದ್ದರೆ ಕುಡಿಯುವದಕ್ಕೆ ಕೊಡು. ಹೀಗೆ ಮಾಡುವದರಿಂದ ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತಾಗುವದು. ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೇತನದಿಂದ ಕೆಟ್ಟತನವನ್ನು ಸೋಲಿಸು.

ರೋಮಾಪುರ 12ರಲ್ಲಿಯ ಈ ವಚನಗಳಿಂದ ತೆಗೆದು ಕೊಳ್ಳ ಬಹುದಾದ ಕೆಲವು

ಮುಕ್ತಾಯ ಪ್ರತಿಪಾದಗಳು ಇಲ್ಲಿವೆ:

(1) ನಾವು ಇತರರನ್ನು ಕ್ಷಮಿಸುವಾಗ ದೇವರು ಮಾಡಿದಂತೆ ನಾವು ಮಾಡಲು ಪ್ರಯತ್ನಿಸುತ್ತೇವೆ - ಅಂದರೆ ಕೆಲವೊಂದು ಘಟನೆಗಳು ನಡೆದಿಲ್ಲವೋ ಎಂಬಂತೆ ಅವುಗಳನ್ನು ನೋಡುತ್ತೇವೆ. ಈ ತತ್ವಕ್ಕೆ ಕೆಲವು ವ್ಯವಹಾರಿಕ ವಿನಾಯಿತಿಗಳು ಮತ್ತು ಕೆಲವು ಸತ್ಯವೇದದ ವಿನಾಯಿತಿಗಳು[10] ಕಂಡು ಕೊಳ್ಳುತ್ತೇವೆ. ಆದರೆ ಭೂತಕಾಲದಲ್ಲಿ ನಡೆದದ್ದು ನಮ್ಮ ಸಂಬಂಧಗಳ ಮೇಲೆ ಪರಿಣಾಮ ಮಾಡದಂತೆ ನಾವು ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತೇವೆ. ಆ ವ್ಯಕ್ತಿಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವದಿಲ್ಲ. ಅವರೊಂದಿಗೆ ಮಾತಾಡುವದನ್ನು ನಿರಾಕರಿಸುವದಿಲ್ಲ. ನಮ್ಮ ಸಂಬಂಧಗಳಲ್ಲಿ ಹಿಂದಿನ ವಿಷಯಗಳನ್ನು ತರಬಾರದೆಂದು ತೀರ್ಮಾನಿಸುತ್ತೇವೆ. "ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ."

(2) ತಪ್ಪು ಮಾಡಿದವರನ್ನು ನಾವು ಕ್ಷಮಿಸುವಾಗ, ನಾವು ಪ್ರತೀಕಾರ ತೆಗೆದುಕೊಳ್ಳಬಾರದೆಂದು ತೀರ್ಮಾನಿಸುತ್ತೇವೆ. ಇತರರೊಂದಿಗೆ ಅವರ ಬಗ್ಗೆ ಮಾತಾಡುವದನ್ನು ಒಳಗೊಂಡಿರುತ್ತದೆ. ನಮಗೆ ತೊಂದರೆ "ಕೊಡುವವರಿಗೆ" ಪ್ರತಿಯಾಗಿ ತೊಂದರೆ ಕೊಡುವ ಯಾವುದೇ ಪ್ರಯತ್ನ ಮಾಡುವದಿಲ್ಲ. ಅಂಥ ವಿಷಯಗಳನ್ನು ದೇವರಿಗೆ ಬಿಟ್ಟುಕೊಡುತ್ತೇವೆ. ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ. ಯಾಕಂದರೆ "ಮುಯ್ಯಿಗೆ ಮುಯ್ಯಿ ತೀರಿಸುವುದು ನನ್ನ ಕೆಲಸ ..." ಎಂದು ಕರ್ತನು ಹೇಳುತ್ತಾನೆ.

(3) ನಾವು ಇತರರನ್ನು ಕ್ಷಮಿಸುವಾಗ, ನಾವು ಕ್ಷಮಿಸುವವರಿಗಾಗಿ ಒಳ್ಳೆದನ್ನು ಹುಡುಕುತ್ತೇವೆ. ಅವರ ಕ್ಷೇಮಾಭಿವೃದ್ಧಿಯನ್ನು ಹುಡುಕುತ್ತೇವೆ. ಇದು "ಆಗಾಪೆ" ಪ್ರೀತಿಯ ಅವಶ್ಯಕವಾದ ಭಾಗವಾಗಿದೆ. ಇದು ಎಲ್ಲಾ ಜನರಿಗೂ ವಿಸ್ತರಿಸಲ್ಪಡಬೇಕು. "ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟ ಬಡಿಸು; ಬಾಯಾರಿದ್ದರೆ ಕುಡಿಯುವದಕ್ಕೆ ನೀರು ಕೊಡು."

(4) ನಾವು ಇತರರನ್ನು ಕ್ಷಮಿಸುವಾಗ, ಅವರ ಕಡೆಗಿರುವ ಎಲ್ಲಾ ದ್ವೇಷವನ್ನು, ವೈರತ್ವವನ್ನು ನಮ್ಮ ಹೃದಯಗಳಿಂದ ತೆಗೆದು ಹಾಕಲು ಪ್ರಯತ್ನಿಸುವೆವು. "ಕೆಟ್ಟತನಕ್ಕೆ ಸೋತುಹೋಗದೆ ಒಳ್ಳೇ ತನದಿಂದ ಕೆಟ್ಟತನವನ್ನು ಸೋಲಿಸು."

ಕೊನೆಯ ಸೂಚನೆಯು ದೀರ್ಘಾವಧಿ ಕ್ಷಮಾಪಣೆಯ ವಿಚಾರಕ್ಕೆ ನಮ್ಮನ್ನು ತರುತ್ತದೆ. ತಕ್ಷಣದ ಅರ್ಥದಲ್ಲಿ ನಾವು ಕ್ಷಮಿಸಿದರೂ ನಮಗೆ ನೋವುಂಟು ಮಾಡುವವರ ಕಡೆಗೆ ಬಹುಶಃ ಕೆಟ್ಟಭಾವನೆಗಳೊಂದಿಗೆ ಹೋರಾಡುವದನ್ನು ಮುಂದು ವರಿಸುತ್ತೇವೆ. ಅವರ ಸುತ್ತಲೂ ಇನ್ನೂ ಸಮಾಧಾನದ ಭಾವನೆಗಳಿರಲಿಕ್ಕಿಲ್ಲ. ದೀರ್ಘಾವಧಿಯ ಕ್ಷಮಾಪಣೆಯು ಬಹಳ ಸಮಯ ತೆಗೆದುಕೊಳ್ಳುವ ಕಾರ್ಯವಾಗಿರುವುದು. ಅದು ವರ್ಷಗಳನ್ನೇ ತೆಗೆದು ಕೊಳ್ಳಬಹುದು. ಜೀವನದುದ್ದಕ್ಕೂ ಇರಬಹುದು.

ದೀರ್ಘಾವಧಿಯ ಕ್ಷಮಾಪಣೆಗೆ ಎರಡು ಬೀಗದ ಕೈಗಳಿರುವವು. ಆ ವಿಷಯದ ಮೇಲೆ ಎಂದೂ ಕಾರ್ಯ ಮಾಡುವದನ್ನು ನಿಲ್ಲಿಸದೇ ಇರುವುದು ಮೊದಲನೆಯದು. ಏನು ಸಂಭವಿಸಲಿಲ್ಲವೇನೋ ಎಂಬಂತೆ ಕ್ಷಮಿಸಲ್ಪಟ್ಟವನನ್ನು ನಡಿಸಿಕೊಳ್ಳುತ್ತ ಮುಂದುವರಿಯ ತಕ್ಕದ್ದು. ನಮ್ಮ ಆಂತರ್ಯದ ಅನಿಸಿಕೆಗಳ ಮೇಲೆ ಕಾರ್ಯ ಮಾಡುವದನ್ನು ಮುಂದುವರಿಸತಕ್ಕದ್ದು. ಅದು ಮಾಡಿದ್ದನ್ನೇ ಮಾಡುವಂಥದ್ದಾಗಿರಬಹುದು. ಆದರೆ ನಿಜವಾಗಿಯೂ ಸಮಯವು ನಮ್ಮ ಗಾಯಗಳನ್ನು ಗುಣಪಡಿಸುವುದು.

ಬಹಳ ಸಮಯವನ್ನು ಪ್ರಾರ್ಥನೆಯಲ್ಲಿ ಕಳೆಯುವುದು ಎರಡನೆಯ ಬೀಗದ

ಕ್ರೈಯಾಗಿದೆ. ನಮಗೆ ಸಹಾಯ ಮಾಡಬೇಕೆಂದು ದೇವರಿಗೆ ಸತತವಾಗಿ ಪ್ರಾರ್ಥಿಸಬೇಕು. "ದೇವರೊಂದಿಗೆ ಎಲ್ಲವೂ ಸಾಧ್ಯ" (ಮತ್ತಾಯ 19:26) ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು. ನಮಗೆ ನೋವು ಕೊಡುವವರ ಪರವಾಗಿ ನಾವು ಸತತವಾಗಿ ಪ್ರಾರ್ಥಿಸಬೇಕು. "ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು" (ಲೂಕ 23:34) ಎಂದು ಯೇಸು ಶಿಲುಬೆಯ ಮೇಲೆ ಪ್ರಾರ್ಥಿಸಿದನು. ಕಷ್ಟ ವ್ಯಕ್ತಿಗಾಗಿ ಸತತವಾಗಿ ಪ್ರಾರ್ಥಿಸುವುದು, ಆದರೆ ಅವರಿಗೆ ವಿರೋಧವಾಗಿ ಮುಂದುವರಿಯುವುದು ಕಷ್ಟಕರವಾದದ್ದು.

ನಮ್ಮ ಹೃದಯಗಳಲ್ಲಿ ದುಃಖಕರವಾದ ಘಟನೆಗಳ ಬಗ್ಗೆ ನಾವು ಯೋಚಿಸುವದನ್ನು ನಿಲ್ಲಿಸುವಾಗ, ಅವು ನಮ್ಮ ಸ್ಮರಣೆಗಳಿಂದ ಅಳಿದು ಹೋಗಲು ಪ್ರಾರಂಭಿಸುವಾಗ, ದೀರ್ಘಾವಧಿಯ ಕ್ಷಮಾಪಣೆಯು ಬೆಳೆಯುತ್ತಿದೆಯೆಂದು ನಾವು ತಿಳಿದು ಕೊಳ್ಳುವೆವು. ನೋವಿಲ್ಲದ ಘಟನೆಗಳನ್ನು ಜ್ಞಾಪಿಸಿಕೊಳ್ಳುವಾಗ ಕ್ಷಮಾಪಣೆಯ ಪ್ರಗತಿಯು ಪೂರ್ಣವಾಗಿದೆಯೆಂದು ತಿಳಿಯುವೆವು. ಜೀವನದಲ್ಲಿ ಈ ಹಂತವನ್ನು ನಾವು ತಲುಪಬಹುದು ಇಲ್ಲವೇ ತಲುಪದಿರಬಹುದು. ತಲುಪಿದರೆ ಅದೊಂದು ದೊಡ್ಡ ಅನುಭವವಾಗಿರುವುದು. ನಮ್ಮ ಕ್ರೈಸ್ತ ನಡೆಯಲ್ಲಿ ಹೊಸ ಪ್ರೌಢಿಮೆಯನ್ನು ತಲುಪಲು ದೇವರು ಸಹಾಯ ಮಾಡಿದ್ದಕ್ಕಾಗಿ ನಾವು ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

**ಕ್ಷಮಾಪಣೆಯು ನಮಗೇನು ಮಾಡುವುದು**

ಕ್ಷಮಿಸುವ ರೂಢಿಯಲ್ಲಿ ನಾವು ಇರುವಾಗ, ಕ್ಷಮಿಸಲ್ಪಟ್ಟವನಿಗಿಂತ ಕ್ಷಮಿಸಿದವನಿಗೆ ಹೆಚ್ಚು ಲಾಭವೆಂದು ಕಂಡು ಕೊಳ್ಳುತ್ತೇವೆ. ನಾವು ಕ್ಷಮಿಸದಿದ್ದರೆ ನಮ್ಮ ಹೃದಯಗಳಲ್ಲಿ ದ್ವೇಷವು ಬೆಳೆಯುತ್ತದೆ. ಈ ಬಲಹೀನತೆಗೆ ವಿರೋಧವಾಗಿ ಇಬ್ರಿಯ. 12:15 ಎಚ್ಚರಿಕೆ ಕೊಡುತ್ತದೆ: "ನಿಮ್ಮಲ್ಲಿ ಯಾವನಾದರೂ ದೇವರ ಕೃಪೆಗೆ ತಪ್ಪಿ ಹಿಂಜರಿಯದಂತೆ ಯಾವ ವಿಷವುಳ್ಳ ಬೇರೂ ನಿಮ್ಮಲ್ಲಿ ಚಿಗುರಿ ಅಸಮಾಧಾನವನ್ನು ಹುಟ್ಟಿಸಿ ಸಭೆಯವರನ್ನು ಕೆಡಿಸದಂತೆ ... ನೋಡಿಕೊಳ್ಳಿರಿ."

ಕ್ಷಮಾಪಣೆಯು ನಮ್ಮನ್ನು ಸ್ವತಂತ್ರರಾಗಿ ಮಾಡುತ್ತದೆ. ಹಗಲಿನಲ್ಲಿ ನಮ್ಮ ವಿಚಾರಗಳನ್ನು ತುಂಬುವದರಿಂದ, ರಾತ್ರಿಯಲ್ಲಿ ನಿದ್ರೆಯಿಂದ ದೂರವಿಡುವದರಿಂದ ವೈರತ್ವವು ನಮ್ಮ ಪ್ರಾಣಗಳನ್ನು ತಿನ್ನಲು ಬಿಡುವದರಿಂದ ಈ ವೈರತ್ವದ ಸಂಗತಿಯು ನಮ್ಮ ಜೀವಿತಗಳನ್ನು ನಿಯಂತ್ರಣದಲ್ಲಿಟ್ಟು ಕೊಳ್ಳಲು ಬಿಡುತ್ತಿದ್ದೇವೆ. ದ್ವೇಷವನ್ನು ಬೆಳಿಸಿಟ್ಟುಕೊಂಡಿರುವುದು ಇತರರಿಗೆ ತೊಂದರೆ ಕೊಡುವದಿಲ್ಲ. ಅದು ನಮಗೇ ನೋವು ಕೊಡುತ್ತದೆ. ನಮಗೆ ನೋವು ಕೊಟ್ಟವರನ್ನು ಕ್ಷಮಿಸುವಂಥದ್ದು ದ್ವೇಷದ ಭಾರವನ್ನು ತೆಗೆದು ಹಾಕುವುದು, ಅಸಮಾಧಾನದ ಬಂಧನ ಬಿಡಿಸುವುದು ಹಾಗೂ ನಮ್ಮ ಜೀವನದೊಂದಿಗೆ ಮುಂದುವರಿಯಲು ಬಿಡುಗಡೆ ಮಾಡುವುದು.[11]

ನಾವು ಕ್ಷಮಿಸಲ್ಪಟ್ಟಂತೆ ನಾವೂ ಕ್ಷಮಿಸಬೇಕೆಂದು ಯೇಸು ಆಜ್ಞಾಪಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಕ್ಷಮಾಪಣೆಯು ನಮಗೆ ಆತ್ಮಿಕವಾಗಿಯೂ ಮಾನಸಿಕವಾಗಿಯೂ ದೈಹಿಕವಾಗಿಯೂ ಸಹಾಯ ಮಾಡುತ್ತದೆ. ಒಬ್ಬ ಲೇಖಕನು ಹೀಗೆ ಹೇಳಿದ್ದಾನೆ:

> ಒಬ್ಬರನ್ನೊಬ್ಬರು ಕ್ಷಮಿಸಲು ದೇವರು ನಮಗೆ ಆಜ್ಞಾಪಿಸಿದ್ದಾನೆ, ಕಾನೂನಿನ ನಿಯಮದಂತೆ ಅಲ್ಲ, ಇಲ್ಲವೇ ಸಮಾಧಾನ ಕಾಪಾಡುವ ನಿಯಮದಂತೆ ಅಲ್ಲ, ಆದರೆ ನಮ್ಮ ಸ್ವಂತ ಲಾಭಕ್ಕಾಗಿ. ವಿರೋಧವನ್ನೂ ದ್ವೇಷ

> ವನ್ನೂ ಬೆಳಿಸಿ ಕೊಳ್ಳುವುದು ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಮಾರಕವಾದದ್ದಾಗಿರುವುದೆಂದು ಸಿದ್ಧಪಡಿಸಲ್ಪಟ್ಟಿದೆ. ಮಹತ್ವದ ಸಂಬಂಧಗಳನ್ನಿಟ್ಟುಕೊಳ್ಳುವ, ಮಕ್ಕಳನ್ನು ಸರಿಯಾಗಿ ಬೆಳೆಸುವ ಇಲ್ಲವೇ ಕೆಲಸವನ್ನು ಕಾಯ್ದುಕೊಂಡು ಹೋಗುವ ಸಾಮರ್ಥ್ಯಕ್ಕೆ ಅದು ಆತಂಕವಾಗುತ್ತದೆ. ಅದು ಆರೋಗ್ಯ, ಆನಂದಗಳೆರಡನ್ನೂ ನಾಶಮಾಡುತ್ತದೆ. ಯಾಕಂದರೆ ಆರೋಗ್ಯ ಆನಂದಗಳೆರಡೂ ಅನಾರೋಗ್ಯಕರವಾದ ದ್ವೇಷ ವಿರೋಧಗಳೊಂದಿಗೆ ಜೊತೆಯಾಗಿ ಹೋಗುವದಿಲ್ಲ. ಇನ್ನೊಂದು ಕಡೆಯಲ್ಲಿ, ನಿಜವಾದ ಕ್ಷಮಾಪಣೆಯು ಮಹಾ ಆನಂದ ಮತ್ತು ಸಂತೃಪ್ತಿಯ ದೇವರ ನಿತ್ಯವಾದ ವಾಗ್ದಾನದೊಂದಿಗೆ ಜೊತೆಗೂಡಿರುವುದು. ಅದು ಸಮಾಧಾನ, ಆನಂದ ಹಾಗೂ ಐಕ್ಯತೆಯ ನಿರಂತರ ಉಕ್ಕುವ ಬುಗ್ಗೆಯಾಗಿರುವುದು.[12]

## ಮುಕ್ತಾಯ

ಈ ಪಾಠವನ್ನು ಸಾಧ್ಯವಾದಷ್ಟು ವ್ಯವಹಾರಿಕವಾದದ್ದನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸೋಣ. ನೀವು ಯಾರನ್ನು ಕ್ಷಮಿಸಬೇಕೆಂದು ದೇವರು ಬಯಸುತ್ತಾನೆ? ಹಿಂದೆ ಯಾರಾದರೂ ನಿಮಗೆ ನೋವು ಕೊಟ್ಟಿರುವರೋ? ಆ ವ್ಯಕ್ತಿಯ ವಿರುದ್ಧವಾಗಿ ಇನ್ನೂ ಕಹಿ ಭಾವನೆಗಳು ಇರುವೆವೋ? ನಿಮ್ಮ ಹೃದಯದಲ್ಲಿ ಅವನನ್ನು ಕ್ಷಮಿಸಿದ್ದೀರೋ? ನೀವು ಅವನನ್ನು ಕ್ಷಮಿಸಿದ್ದರೆ ಹಿಂದಿನ ಅಪರಾಧವು ನಿಮ್ಮ ಸಂಬಂಧದ ಮೇಲೆ ಪರಿಣಾಮ ಮಾಡದಂತೆ ಪ್ರತಿಯೊಂದು ಪ್ರಯತ್ನ ಮಾಡುತ್ತಿರುವಿರೋ? ನಿಮ್ಮ ಮನೋಭಾವನೆಯ ಮೇಲೆ ಕೆಲಸ ಮಾಡುವದನ್ನು ಮುಂದರಿಸಿರುವಿರೋ? ನಿಮಗೆ ನೋವು ಕೊಟ್ಟ ವ್ಯಕ್ತಿಗಾಗಿ ಅನುದಿನವೂ ಪ್ರಾರ್ಥಿ ಸುತ್ತಿರುವುರೋ?

ಕ್ಷಮಾಪಣೆಯ ಬದಲು ದ್ವೇಷವನ್ನು ನಿಮ್ಮ ಹೃದಯದಲ್ಲಿ ಕಂಡುಕೊಂಡರೆ, ಆ ವ್ಯಕ್ತಿಯನ್ನು ಕ್ಷಮಿಸಲು ನೀವು ಮಾರ್ಗ ಕಂಡು ಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ. ಈ ಅಧ್ಯಯನದಿಂದ ಎರಡು ಪ್ರಮುಖ ಪಾಠಗಳನ್ನು ಜ್ಞಾಪಕದಲ್ಲಿಟ್ಟು ಕೊಳ್ಳಿರಿ: (1) ಕೋಟ್ಯಂತರ ಮೊತ್ತದಷ್ಟು ಪಾಪವು ನಮಗಾಗಿ ಕ್ಷಮಿಸಲ್ಪಟ್ಟಿದೆ. ನೂರರ ಮೊತ್ತದ ಪಾಪಗಳುಳ್ಳ ಇತರರನ್ನು ಕ್ಷಮಿಸಲು ನಾವು ಸಿದ್ಧರಿರಬೇಕು. (2) ನಾವು ಕ್ಷಮಿಸದಿದ್ದರೆ, ನಾವು ಕ್ಷಮಿಸಲ್ಪಡುವದಿಲ್ಲ.

ಕ್ಷಮಿಸುವದನ್ನು ಕಲಿಯಲು ದೇವರು ನಮಗೆ ಸಹಾಯಮಾಡಲಿ.

## ಪ್ರಸಂಗಿಗಳಿಗೂ ಬೋಧಕರಿಗೂ ಟಿಪ್ಪಣಿಗಳು

ನೀವು ಈ ಪಾಠವನ್ನು ಒಂದು ಕ್ಲಾಸಿನಲ್ಲಿ ಉಪಯೋಗಿಸುತ್ತಿದ್ದರೆ 18ನೆಯ ಅಧ್ಯಾಯದ ಉಳಿದ ಭಾಗವನ್ನು ಕ್ಷಮಾಪಣೆಯ ಮೇಲಿನ ಯೇಸುವಿನ ಬೋಧನೆಯೊಂದಿಗೆ ಸಂಬಂಧಿಸಲು ಬಯಸಬಹುದು. ತಪ್ಪುಮಾಡುವ ಕ್ರೈಸ್ತನನ್ನು ಪುನಃ ಸ್ವೀಕರಿಸಿಕೊಳ್ಳುವ ಇಲ್ಲದೇ ಅವಶ್ಯವಿದ್ದರೆ ಶಿಕ್ಷಿಸುವ ಪ್ರಯತ್ನ ಮಾಡಬಾರದೆಂದು 21ರಿಂದ 35ರವರಿಗೆ ವಚನಗಳ ಅರ್ಥವಲ್ಲ (15-21 ವಚನಗಳು). ಆದರೆ ಅವು ಹೀಗೆ ಬೋಧಿಸುತ್ತವೆ (1) ಸಭೆಯ ಶಿಕ್ಷೆಯು ಎಂದೂ ವೈಯಕ್ತಿಯ ದ್ವೇಷದ ಕಾರ್ಯವಾಗಿರ ಬಾರದು; (2) ಶಿಕ್ಷಿತರಾದವರ ಕಡೆಗೆ ನಮ್ಮ ಹೃದಯಗಳಲ್ಲಿ ವಿರೋಧವನ್ನು ಸಾಧಿಸಬಾರದು; ಹಾಗೂ (3) ಸಭೆಯಲ್ಲಿ ಪ್ರೀತಿಯ ಹಾಗೂ ಕ್ಷಮಾಪಣೆಯ ವಾತಾವರಣವು ಇರಬೇಕು.

"ಒಬ್ಬನು ತಾನು ಪಶ್ಚಾತ್ತಾಪ ಪಟ್ಟಿದ್ದೇನೆಂದು ಹೇಳಿರದಿದ್ದರೆ (ಅಂದರೆ ಕ್ಷಮಾಪಣೆಗಾಗಿ ಕೇಳಿರದಿದ್ದರೆ) ಅವನನ್ನು ನಾನು ಕ್ಷಮಿಸಬಹುದೋ" ಎಂಬ ವಿಷಯವು ಆಗಾಗ ಚರ್ಚಿಸಲ್ಪಟ್ಟದ್ದರಿಂದ ಅದನ್ನು ಹೇಳುವದಕ್ಕಾಗಿ, ನನ್ನ ವಿಷಯ ಬಿಟ್ಟು ಹೋಗಿರುವದಿಲ್ಲ. ಈ ಚರ್ಚೆಯು ಲೂಕ 17:4ರಲ್ಲಿ ಯೇಸುವಿನ ಮಾತುಗಳ ಮೇಲೆ ಆಧಾರಗೊಂಡಿದೆ. ಒಬ್ಬನು ಪಶ್ಚಾತ್ತಾಪ ಪಡದೇ ಇರುವವರೆಗೆ ದೇವರು ಯಾರನ್ನೂ ಕ್ಷಮಿಸದೆ ಇರುವದರಿಂದ ಒಬ್ಬನು ಪಶ್ಚಾತ್ತಾಪ ಪಡುವವರೆಗೆ ನಾವು ಅವನನ್ನು ಕ್ಷಮಿಸುವದನ್ನು ದೇವರು ನಿರೀಕ್ಷಿಸುವುದಿಲ್ಲ ಈ ಇಡೀ ಚರ್ಚೆಯೊಂದಿಗೆ ನನಗಿರುವ ಸಮಸ್ಯೆಯು ನಾನು ದೇವರಾಗಿಲ್ಲದಿರುವುದು. "ನಾನು ಪಶ್ಚಾತ್ತಾಪ ಪಡುತ್ತೇನೆ" ಎಂದು ಯಾರಾದರೂ ಹೇಳುವಾಗ, ಅವನು ನನ್ನ ಪಶ್ಚಾತ್ತಾಪ ಪಟ್ಟನೋ, ಇಲ್ಲವೋ ಎಂಬುದು ನನಗೆ ತಿಳಿದಿರುವದಿಲ್ಲ. ಅವನು ನನ್ನನ್ನು ಕ್ಷಮಾಪಣೆ ಕೇಳು ವಾಗ ಅವನು ಎಷ್ಟು ಯಥಾರ್ಥನಾಗಿರುವ ನೆಂಬುದನ್ನು ತಿಳಿಯುವ ವಿಧಾನವೂ ಇರುವದಿಲ್ಲ. ಒಂದು ದಿನದಲ್ಲಿ ಒಬ್ಬನು ಏಳುಸಲ ನನ್ನಲ್ಲಿ ತಪ್ಪು ಮಾಡಿದರೆ (ಲೂಕ 17:4) ಮತ್ತು ಪ್ರತಿಯೊಂದು ಸಲ ಬಂದು, "ನಾನು ಪಶ್ಚಾತ್ತಾಪ ಪಡುತ್ತೇನೆ" ಎಂದು ಹೇಳಿದರೆ, ಮೂರನೆಯ ಸಲ ಬಂದಾಗ ಅವನ ಯಥಾರ್ಥತೆಯ ಬಗ್ಗೆ ಸಂಶಯ ಪಡಲು ಪ್ರಾರಂಭಿಸುತ್ತೇನೆ. ಯಾರಿಂದಲಾದರೂ ಕ್ಷಮಾಪಣೆಯನ್ನು ಹಿಡಿದಿಟ್ಟು ಕೊಳ್ಳಲು ನಮಗೆ ಹಕ್ಕು ಇಲ್ಲ ಎಂಬುದನ್ನು ಆತನು ಒತ್ತಿ ಹೇಳುವಷ್ಟು ಮನುಷ್ಯನ ಪಶ್ಚಾತ್ತಾಪ ಸಂಗತಿ ಗಳನ್ನು ಯೇಸು ಒತ್ತಿ ಹೇಳುತ್ತಿರುವನು ಎಂದು ನಾನು ಯೋಚಿಸುವದಿಲ್ಲ.

ನಾನು ಚರ್ಚೆಯನ್ನು ತಪ್ಪಿಸಿದ್ದರ ಕಾರಣವು ರೂಢಿಪ್ರಕಾರದ ("ನನ್ನನ್ನು ಕ್ಷಮಿಸಿರಿ, ನಾನು ತಪ್ಪುಮಾಡಿದ್ದೇನೆ" ... "ನಿನಗೆ ಕ್ಷಮಾಪಣೆಯಾಗಿದೆ.") ಕ್ಷಮಾಪಣೆಯ ಆಚರಣೆಯ ಬಗ್ಗೆ ನಾನು ಸಂಬಂಧಿಸಿದರೆ, ನಮ್ಮ ಹೃದಯಗಳ ಸ್ಥಿತಿಯಬಗ್ಗೆ ಆಸಕ್ತನಾಗಿರುವುದರಿಂದ "ನೀವು ನಿಮ್ಮ ಪ್ರತಿಯೊಬ್ಬ ಸಹೋದರನಿಗೆ ಮನಃ ಪೂರ್ವಕವಾಗಿ ಕ್ಷಮಿಸದೆ ಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು" ಎಂದು ಯೇಸು ಹೇಳುವದರೊಂದಿಗೆ ಕ್ಷಮಿಸದೆ ಹೋದ ಸೇವಕನ ಉದಾಹರಣೆಯನ್ನು ಕೊಟ್ಟು ಮುಗಿಸಿದನು. "ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು" (ಲೂಕ 23:34) ಎಂದು ಯೇಸು ಪ್ರಾರ್ಥಿಸಿದಾಗ, ತನ್ನನ್ನು ಶಿಲುಬೆಗೆ ಹಾಕುತ್ತಿರುವ ಪಾಪವು ತಕ್ಷಣವೇ ಕ್ಷಮಿಸಲ್ಪಟ್ಟಿತು ಎಂಬುದನ್ನು ಆತನ ಮಾತುಗಳು ಸೂಚಿಸಲಿಲ್ಲ. ಐವತ್ತು ದಿನಗಳನಂತರ ಪೇತ್ರನು ಆ ಪಾಪವನ್ನು ಯೆಹೂದ್ಯರ ಮೇಲೆ ಹೊರಿಸಿದನು (ಅ.ಕೃ. 2:23). ತನ್ನ ಸ್ವಂತ ಹೃದಯವು ದ್ವೇಷದಿಂದ ತುಂಬಿರುವದಿಲ್ಲ ಎಂಬುದನ್ನು ಯೇಸುವಿನ ಮಾತುಗಳು ಸೂಚಿಸಿದವು.

ಅವರು ಪಶ್ಚಾತ್ತಾಪ ಪಡದಿದ್ದರೂ ನಾವು ಕ್ಷಮಿಸಬಹುದೋ? ಎಂಬ ಪ್ರಶ್ನೆಯ ಮೇಲಿನ ಚರ್ಚೆಯನ್ನು ನಾನು ಓದುವಾಗ, ಪಶ್ಚಾತ್ತಾಪ ಪಟ್ಟಿರಲಿ, ಪಟ್ಟಿರದಿರಲಿ ಅವನನ್ನು ಔಪಚಾರಿಕವಾಗಿ "ಕ್ಷಮಿಸಬೇಕು," ನಾವು ವಿರೋಧಗಳನ್ನು ಇಟ್ಟು ಕೊಳ್ಳಬಾರದು ಎಂದು ಲೇಖಕನು ಒತ್ತಿ ಹೇಳಿರುವನೋ ಎಂಬುದನ್ನು ಪರೀಕ್ಷಿ ಸುತ್ತೇನೆ. ಆ ವಿಷಯವನ್ನು ಅವನು ಒತ್ತಿಹೇಳಿದ್ದರೆ, ಅವನೊಂದಿಗೆ ನನಗೆ ಭಿನ್ನಾಭಿಪ್ರಾಯ ಇರುವದಿಲ್ಲ.

ಟಿಪ್ಪಣಿಗಳು

[1]Eldred Echols, Discovering the Pearl of Great Price (Fort Worth, Tex.: Sweet Publishing Co., 1992), 43. [2]ಅವರು ತಮ್ಮ ಬೋಧನೆಯನ್ನು ಆಮೋಸ 1ಮತ್ತು 2ರ ಮೇಲೆ ಅವಲಂಭಿಸಿದರು. ದೇವರು ವಿವಿಧ ಜನಾಂಗಗಳನ್ನು ಮೂರು ಅಪರಾಧಗಳಿಗಾಗಿ ಕ್ಷಮಿಸಿದನು ಹಾಗೂ ನಾಲ್ಕನೆಯ ಅಪರಾಧಕ್ಕಾಗಿ ತನ್ನ ಕೋಪವನ್ನು ಸುರಿಸಿದನು ಮತ್ತು ದೇವರು ಜನರಿಂದ ಹೆಚ್ಚಾದದ್ದನ್ನು ಅಪೇಕ್ಷಿಸುವದಿಲ್ಲ ಎಂಬುದು ಅವರ ತರ್ಕವಾಗಿತ್ತು (ಆಮೋಸ 1:3 ಇತ್ಯಾದಿ). [3]ಕೆಲವು ಪುರಾತನ ಪ್ರತಿಗಳಲ್ಲಿ "ಎಪ್ಪತ್ತು ಹಾಗೂ ಏಳು" ಎಂದಿದೆ (ನೋಡಿರಿ NIV). ಆದಿಕಾಂಡ 4:24 ಇಂಥ ಪದವನ್ನು ಉಪಯೋಗಿಸುತ್ತದೆ. ನಿರ್ಧಿಷ್ಟವಾದ ಸಂಖ್ಯೆಯು ಮಹತ್ವದ್ದಲ್ಲ. ನಮ್ಮ ಕ್ಷಮಾಪಣೆಗೆ ಮಿತಿಯಿಲ್ಲ ಎಂಬುದನ್ನು ಬೋಧಿಸಲು 77ಇರಲಿ ಇಲ್ಲವೇ 490 ಇರಲಿ. ಯೇಸು ಅತಿಯಾದ ಸಂಖ್ಯೆಯನ್ನು ಹೇಳಿದನು. [4]ಎಲ್ಲವೂ ಅಗ್ಗವಾಗಿದ್ದ, ನೂರಾರು ವರ್ಷಗಳ ಹಿಂದಿನಿಂದ ಬಂದ ಸಂಖ್ಯೆಗಳನ್ನು ಕೆಲವು ಪಂಡಿತರು ಇನ್ನೂ ಉಪಯೋಗಿಸುವುದು ಒಂದು ಸಮಸ್ಯೆಯಾಗಿದೆ. [5]ಇಡೀ ಪಾಲೆಸ್ತೀನಿಗಾಗಿ ವಾರ್ಷಿಕ ಒಟ್ಟು ಕರವು (tax) ಕೇವಲ ಎಂಟುನೂರು ತಲಾಂತುಗಳಾಗಿತ್ತು. ಸಾಮಾನ್ಯ ಕೆಲಸ ಮಾಡುವ ಮನುಷ್ಯನು ಒಂದು ತಲಾಂತನ್ನು ಸಂಪಾದಿಸಲು ಇಪ್ಪತ್ತು ವರ್ಷಕೆಲಸ ಮಾಡಬೇಕಾಗಿತ್ತು. ದಾವೀದ ಹಾಗೂ ಅವನ ರಾಜಕುಮಾರರು ದೇವಾಲಯವನ್ನು ಕಟ್ಟಲು ಅದರ ಎರಡು ಪಟ್ಟಿಗಿಂತ ಸ್ವಲ್ಪ ಹೆಚ್ಚಾದ ಹಣವನ್ನು ಒದಗಿಸಿ ಕೊಟ್ಟರು (1 ಪೂರ್ವಕಾಲ ವೃತ್ತಾಂತ 29:4-7). ಕೆಲವು ಪಂಡಿತರು ಹತ್ತುಸಾವಿರ ತಲಾಂತಿನ ಬೆಲೆ ಇಂದು ಒಂದು ಬಿಲಿಯ ಡಾಲರುಗಳಿಗಿಂತ ಹೆಚ್ಚಾಗುವದೆಂದು ಹೇಳುತ್ತಾರೆ. [6]ಇದನ್ನು ಮಾಡಲು ಆ ಮನುಷ್ಯನಿಗೆ ಕಾನೂನು ಬದ್ಧ ಅಧಿಕಾರವಿತ್ತು. ಆದರೆ ವಿಶೇಷವಾಗಿ ಅವನಿಗೆ ಈಗಲೇ ಕರುಣೆಯು ತೋರಿಸಲ್ಪಟ್ಟಿದ್ದರಿಂದ ನೈತಿಕ ಹಕ್ಕು ಇರಲಿಲ್ಲ. [7]KJV ಯಲ್ಲಿ ಈ ಮಾತಿದೆ. "ಜೋಲರ್ಸ್" ಎಂದಿರುವ ಕೆಲವು ಅವೃತ್ತಿಗಳಿಂತ ಹೆಚ್ಚು ಉತ್ತಮ ಭಾಷಾಂತರವಾಗಿದೆ. [8]ದೇವರು ಸರ್ವಜ್ಞಾನಿಯು: ಆತನು ಪ್ರತಿಯೊಂದನ್ನು ತಿಳಿದಿರುವನು. ಕ್ಷಮಿಸಲ್ಪಟ್ಟ ಪಾಪಗಳ ವಿವರಣೆಯನ್ನೂ ಇದು ಒಳಗೊಂಡಿರುವುದು. [9]Warren W. Wiersbe, The Bible Expository Commentary, vol. 2 (Wheaton, Ill.: Victor Books, 1989), 89. [10]ನಿಮ್ಮಿಂದ ಕದಿಯುವ ಮನುಷ್ಯನನ್ನು ನೀವು ಕ್ಷಮಿಸಿದರೂ ನಿಮ್ಮ ಹಣಕಾಸಿನ ವ್ಯವಹಾರ ನೋಡಿಕೊಳ್ಳಲು ಕೂಡಲೇ ಅವನನ್ನು ನೇಮಿಸಬಾರದೆಂಬುದನ್ನು ಸಾಮಾನ್ಯ ಜ್ಞಾನ ಹೇಳುತ್ತದೆ. ನಿಮ್ಮ ಮಗುವನ್ನು ದುರುಪಯೋಗಮಾಡಿದ ಒಬ್ಬ ಮಹಿಳೆಯನ್ನು ಕ್ಷಮಿಸಿದರೂ ಆಕೆಯನ್ನು ಕೂಡಲೇ ಮಗುವಿನ ಪಾಲನೆಗೆ ನೇಮಿಸಿಕೊಳ್ಳುವದಿಲ್ಲ. ಸತ್ಯವೇದದ ಅಪವಾದಗಳನ್ನು ಕುರಿತು ಒಂದು ಉದಾಹರಣೆ ಸಾಕಾಗುತ್ತದೆ: ಒಬ್ಬ ಸಂಗಾತಿಯು ಅಪನಂಬಿಗಸ್ತನಾಗಿ ಕ್ಷಮಾಪಣೆ ಕೇಳುತ್ತ ನಿಮ್ಮ ಬಳಿಗೆ ಬಂದರೆ ನೀವು ಅವನನ್ನು ಇಲ್ಲವೇ ಆಕೆಯನ್ನು ಕ್ಷಮಿಸತಕ್ಕದ್ದು. ಏನೂ ಸಂಭವಿಸಿಯೇ ಇಲ್ಲ ಎಂಬಂತೇ ಈ ವ್ಯಕ್ತಿಯೊಂದಿಗೆ ಗಂಡನಾಗಿಯಾಗಲೀ ಇಲ್ಲವೇ ಹೆಂಡತಿಯಾಗಲೀ ಜೀವಿಸಲೇ ಬೇಕೆಂಬುವುದೇ ಇದರ ಅರ್ಥವಲ್ಲ (ಮತ್ತಾಯ 19:3-9). ಅಂಥ ಸಂಗತಿಗಳು ನಿಯಮಕ್ಕೆ ಅಪವಾದಗಳಾಗಿವೆ. ಹೆಚ್ಚಾದ ಪ್ರಕರಣಗಳಲ್ಲಿ ನೋವು ಹೊಂದಿರುವಂಥದ್ದು ನಮ್ಮ ಭಾವನೆ ಗಳು. ಅಂಥ ಪ್ರಕರಣಗಳನ್ನು ಅಪವಾದಗಳು ಅನ್ವಯಿಸುವದಿಲ್ಲ.

[11]ಇದು ಸಂಗಾತಿಯಿಂದ ಇತ್ತೀಚೆಗೆ ತಿರಸ್ಕರಿಸಿ ಬಿಡಲ್ಪಟ್ಟವರಿಂದ ಕಲಿಯಬೇಕಾದ ಪ್ರಮುಖ ಪಾಠವಾಗಿದೆ. ವ್ಯಕ್ತಿಯು ಸತ್ತುಹೋಗಿದ್ದರೂ ಈ ತತ್ವವು ಸತ್ಯವಾಗಿದೆಯೆಂದು ನಾನು ಹೇಳುತ್ತೇನೆ. ಮಗುವಾಗಿದ್ದಾಗ ದುರುಪಯೋಗಕ್ಕೆ ಒಳಗಾದ ಅನೇಕ ಮಕ್ಕಳು ತಮ್ಮನ್ನು ದುರುಪಯೋಗ ಮಾಡಿಕೊಂಡವರು - ಈಗ ಸತ್ತುಹೋಗಿದ್ದರೂ ಅವರಿಗಾಗಿ ತಿರಸ್ಕಾರ ವ್ಯಕ್ತಪಡಿಸುತ್ತಾರೆ. ಇವರು ಸಮಾಧಾನ ಕಂಡುಕೊಳ್ಳುವ ಮೊದಲು ಆ ವ್ಯಕ್ತಿಗಳನ್ನು ಕ್ಷಮಿಸುವ ಮಾರ್ಗ ಕಂಡುಕೊಳ್ಳಬೇಕು. ನೋವುಂಡ ವ್ಯಕ್ತಿಯು ಸತ್ತುಹೋದ ವ್ಯಕ್ತಿಗಳಿಗೆ ತಮ್ಮ ನೋವನ್ನೂ ಹಾಗೂ ಕ್ಷಮಿಸಲು ತಮ್ಮ ತೀರ್ಮಾನವನ್ನೂ ವಿವರಿಸಿ ಪತ್ರ ಬರೆಯುವುದು ಒಂದು ತಂತ್ರವಾಗಿದೆ. [12]Echols, 49



© 2009 Truth for Today